ನೋವಿನಿಂದ. 'ನಿನ್ನದು ವಾಸಿ, ಮೊನ್ನೆ ಒಬ್ಬರ ಎದುರು ಹೀಗೇ ಏಕಪಾತ್ರಾಭಿನಯ ಮಾಡ್ತಾ ಇದ್ದಾಗ ಆವೇಶದಲ್ಲಿ ಅವರ ಕಾಲರಿಗೆ ಕೈ ಹಾಕಿ ಶರ್ಟ್ ಅನ್ನೇ ಹರ್ದು ಹಾಕಿದ್ದ. ಪಾಪ ಆ ಮನುಷ್ಯ ಹರಿದ ಶರ್ಟಲ್ಲೇ ಮನೆಗೆ ಹೋಗ್ಬೇಕಾಯ್ತು' ಅಂತ ಅವ ಹೇಳಿದಾಗ ನಾನು ಮತ್ತಷ್ಟು ಗಾಬರಿಯಾದೆ. ಎದ್ದೆನೋ ಬಿದ್ದೆನೋ ಅಂತ ಅವನ ಮನೆಯಿಂದ ವಾಪಾಸು ಬಂದೆ.

ಬಂಧುಗಳೊಬ್ಬರ ಮಗ ಆಗಷ್ಟೇ ಐದನೇ ಕ್ಲಾಸಿನಲ್ಲಿ ಓದುತ್ತಿದ್ದ. ಕರಾಟೆಯಲ್ಲಿ ಯಾವುದೋ ಪ್ರಶಸ್ತಿ ಗಳಿಸಿದ್ದ. ಬೇಸಿಗೆ ರಜೆಯಲ್ಲಿ ಊರಿಗೆ ಬಂದವರು ಒಂದು ದಿನ ನನ್ನ ಮನೆಗೂ ಬಂದರು. ಗೇಟಿನಲ್ಲಿ ಒಳಗೆ ಬರುವಾಗಲೇ 'ಹೂ ಹಾ ಯೂ' ಅನ್ನುತ್ತ ಗಾಳಿಯಲ್ಲಿ ಕೈಕಾಲು ಆಡಿಸುತ್ತ ಇದ್ದ. ನನಗೆ ಆ ಹುಡುಗನ ಕರಾಟೆಯ ಸಾಧನೆಯ ಬಗ್ಗೆ ತಿಳಿದಿತ್ತು. ಅದರ ಬಗ್ಗೆ ವಿಸ್ತಾರವಾಗಿ ಕೇಳಿ ಪ್ರತಿಭಾ ಪೀಡನೆಗೆ ಒಳಗಾಗುವುದು ಬೇಡ ಎಂದು ಲೆಕ್ಕ ಹಾಕಿದ್ದೆ. ಆದರೆ ಆ ಬಂಧುಗಳು ಸುಮ್ಮನೆ ಇರಲಿಲ್ಲ. 'ನನ್ನ ಮಗ ಕರಾಟೆಯಲ್ಲಿ ಚಾಂಪಿಯನ್. ಮೊನ್ನೆ ಫಸ್ಟ್ ಪ್ರೈಜ್ ಗೆದ್ದ. ಲಾಸ್ಟ್ ಇಯರ್ ಇಡೀ ಝೋನಿಗೇ ಇವ ಫಸ್ಟ್. ತುಂಬ ಕಡೆ ಇವ ಷೋ ಕೊಡ್ತಾ ಇರ್ತಾನೆ' ಅಂತ ಹೇಳತೊಡಗಿದರು. ಅದರಲ್ಲೂ ಅವನ ಹೆಂಡತಿ ನೀವು ನನ್ನ ಮಗನ ಷೋ ನೋಡ್ಬೇಬೇಕು ಅಷ್ಟು ಚೆಂದ. ಇಮೇಜಿಂಗ್ ಆಗಿ ಇರ್ತದೆ ಅಂತ ನನ್ನ ಮೇಲೆ ಒತ್ತಡ ಹಾಕುವ ರೀತಿಯಲ್ಲಿ ಹೇಳಿದಳು. ಅವಳ ಧಾಟಿ ಹೇಗಿತ್ತು ಅಂದರೆ, ನೀವು ನನ್ನ ಮಗನ ಪ್ರತಿಭಾ ಪ್ರದರ್ಶನ ನೋಡದೇ ಇದ್ದರೆ ನಿಮ್ಮ ಜೀವನವೇ ವ್ಯರ್ಥ ಎಂಬಂತೆ ಇತ್ತು. ಸರಿ ಮತ್ತೇನು ಮಾಡುವುದು? ದಾಕ್ಷಿಣ್ಯಕ್ಕೆ ಕಟ್ಟುಬಿದ್ದು 'ಮರೀ ತೋರ್ಸು ನಿನ್ನ ಕರಾಟೆ ಟ್ಯಾಲೆಂಟ್' ಅಂತ ಹೇಳಿದೆ. ಅವ ಕ್ಷಣ ಮಾತ್ರದಲ್ಲಿ ತಯಾರಾದ. ಅಪ್ಪ ಅಮ್ಮನ ಕಾಲಿಗೆ ಬಿದ್ದ. ಕುತ್ತಿಗೆಯಲ್ಲಿದ್ದ ಪೆಂಡೆಂಟನ್ನು ಕಣ್ಣು ಮುಚ್ಚಿ ಎಂಥದೋ ಮಣ ಮಣ ಹೇಳಿ ಚುಂಬಿಸಿದ. ಕೊನೆಗೆ ಯಾ ಹೂ ಅನ್ನುತ್ತ ಗಾಳಿಯಲ್ಲಿ ಕೈ ಕಾಲು ಆಡಿಸಿದ. ಇದೆಲ್ಲ ಮಾಮೂಲಿದ್ದು ಆಯ್ತು. ಸ್ಪೆಷಲ್ ತೋರ್ಸು ಅಂದ ಅವನ ಅಪ್ಪ. ಆ ಹುಡುಗ ಯಾ ಹೂ ಎನ್ನುತ್ತ ನನ್ನ ಡೈನಿಂಗ್ ಟೇಬಲ್ಲಿಗೆ ಗುದ್ದಿದ. ಟೇಬಲ್ಲಿನ ಮೇಲೆ ಇದ್ದ ಗಾಜು ಬಿರುಕು ಬಿಟ್ಟಿತು. 'ಅಯ್ಯೋ!' ಎಂದು ಚೀರಿದಳು ನನ್ನ ಹೆಂಡತಿ. 'ಹೇಗಿತ್ತು? ಮಗನ ಟ್ಯಾಲೆಂಟ್?' ಅಂತ ಆ ಬಂಧುಗಳು ಶಹಬ್ಬಾಸ್‌ಗಿರಿ ಅಪೇಕ್ಷಿಸುವ ನಿಟ್ಟಿನಿಂದ ಕೇಳಿದರು. ನಾನು ಡೈನಿಂಗ್ ಟೇಬಲ್ಲಿನ ಮೇಲೆ ಹಾಕಿದ್ದ ಬಟ್ಟೆಯನ್ನು ತೆಗೆದು, 'ನೋಡಿ ಹೀಗಾಗಿದೆ ನಿಮ್ಮ ಮಗನ ಕರಾಟೆಯ ಪ್ರತಾಪ' ಅಂತ ಸೆರೆಬಿಟ್ಟ ಗಾಜನ್ನು ತೋರಿಸಿದೆ. ಅವರ ಮುಖ ಹಳ್ಳ ಹುಳ್ಳಗಾಯಿತು.

'ಎಷ್ಟಪ್ಪಾ ಇದರ ರೇಟು?' ಅಂತ ಕೇಳಿದ. ನಾನು 'ಎಂಟು ಸಾವಿರ' ಅಂತ ಅಂದೆ. 'ತಗೊಂಡು ಎಷ್ಟು ವರ್ಷ ಆಗಿತ್ತು?' ಅಂತ ಅವನ ಹೆಂಡತಿ ಕೇಳಿದಳು. 'ಆರೋ ಏಳೋ ವರ್ಷ ಆಗಿದೆ' ಅಂತ ಹೇಳಿದೆ. ಅದಕ್ಕೆ ಅವನ ಹೆಂಡತಿ, 'ಅಯ್ಯೋ ಬಿಡಿ ಅದು ಹೇಗಿದ್ರೂ ಹಳೇ ಡೈನಿಂಗ್ ಟೇಬಲ್. ಹೊಸಾದು ತೆಕೊಂಡ್ರೆ ಆಯ್ತಪ್ಪ. ನಂ ಮನೇಲಿ ಇದಕ್ಕಿಂತಾ ಕಾಸ್ಟ್ಲೀದ್ದನ್ನೇ ಇವ ಒಡ್ದು ಹಾಕಿದ್ದಾನೆ. ಅದು ಎಂಥಾ ಗ್ಲಾಸೂ ಅಂತೀರಾ? ಅಂತಿಂಥದ್ದು ಅಲ್ಲ ಮೂವತ್ತು ಸಾವಿರದ್ದು. ತೆಕ್ಕೊಂಡು ಒಂದು ವಾರನೂ ಆಗಿರ್ಲಿಲ್ಲ. ಅದನ್ನೇ ಪುಡಿ ಮಾಡಿದ್ರೂ ನಾವು ಕ್ಯಾರೇ ಮಾಡ್ಲಿಲ್ಲ? ನೀವು ಇಷ್ಟಕ್ಕೇ ಅಳ್ತಾ ಇದ್ದೀರಲ್ವಾ? ಹೊಸಾದು ತಗೊಳ್ಳಿ. ಅದ್ರ ಎಕ್ಸ್ಪೆನ್ಸ್ ಎಷ್ಟು ಹೇಳಿ. ಕೊಡಿಸಿ ಕೊಡ್ತೀನಿ' ಅಂತ ರೋಪು ಹಾಕುವ ಧಾಟಿಯಲ್ಲಿ ಮಾತಾಡಿದಳು. ನನಗೆ ರೇಗಿ ಹೋಯಿತು. 'ದುಡ್ಡು ಉಂಟೂ ಅಂತ ಮೆರೀಬೇಡಿ. ಸುರೂವಿಗೆ ನಿಂ ಮಗನಿಗೆ ಸರಿಯಾದ ಬುದ್ಧಿ ಕಲಿಸಿ. ಬೇರೆಯವರ ಮನೆಗೆ ಹೋದಾಗ ಕನಿಷ್ಠ ಹೇಗೆ ವರ್ತಿಸ್ಬೇಕು ಅಂತಲೂ ಗೊತ್ತಿಲ್ವಲ್ಲಾ?' ಅಂತ ಸ್ವರ ಏರಿಸಿ ಮಾತಾಡಿದೆ. ಸ್ವಲ್ಪ ಪರಿಸ್ಥಿತಿ ವಿಕೋಪಕ್ಕೆ ಹೋಯಿತೆಂದೇ ಹೇಳಬೇಕು. ಅಷ್ಟರಲ್ಲಿ ನನ್ನ ಹೆಂಡತಿ ಮಧ್ಯ ಪ್ರವೇಶಿಸಿ ಪರಿಸ್ಥಿತಿ ತಿಳಿಗೊಳಿಸಿದಳು. ಈ ಘಟನೆಯಾಗಿ ಎರಡು ಮೂರು ವರ್ಷಗಳೇ ಸಂದಿವೆ, ಆದರೂ ಆ ತಂದೆ ತಾಯಿಯ ಸಿಟ್ಟು ಇನ್ನೂ ನಮ್ಮ ಮೇಲೆ ಹೋಗಿಯೇ ಇಲ್ಲ. ಯಾವುದಾದರೂ ಸಭೆ ಸಮಾರಂಭಗಳಲ್ಲಿ ಸಿಕ್ಕರೆ ನೋಡಿಯೂ ನೋಡದವರಂತೆ ಮುಂದೆ ಸಾಗುತ್ತಾರೆ.

'ನನ್ನ ಮಗ ಬಿಲ್ಲು ವಿದ್ಯೆಯಲ್ಲಿ ನಿಪುಣ. ಅದು ಕೂಡ ಏಕಲವ್ಯನ ಹಾಗೆ. ಶಬ್ದವೇದಿ ವಿದ್ಯೆಯಲ್ಲಿ ಇನ್ನೂ ನಿಪುಣ' ಎಂದು ಗೆಳೆಯನೊಬ್ಬ ಮಗನ ಪ್ರತಿಭೆಯ ಬಗ್ಗೆ ಮನಸಾರೆ ಹೊಗಳಿದ. ನಾನು ಹೌದಾ ಎಂದಷ್ಟೇ ಕೇಳಿ ಸುಮ್ಮನಾದೆ. ಮತ್ತೆ ಏನನ್ನೂ ಕೇಳಲು ಹೋಗಿರಲಿಲ್ಲ ತನ್ನ ಮಗನ ಪ್ರತಿಭೆಯ ಬಗ್ಗೆ ನಾನು ಏನು ಆಸಕ್ತಿ ವಹಿಸದೆ ಇದ್ದದ್ದು ಕಂಡು ಅವನಿಗೆ ನಿರಾಸೆ ಆಯಿತು ಎಂದು ಕಾಣುತ್ತದೆ. 'ಎಂಥಾ ನಿಪುಣ ಗುರಿಕಾರ ಗೊತ್ತಾ ನನ್ನ ಮಗ ಎಷ್ಟು ದೂರದಿಂದ ಬೇಕಾದರೂ ನಿಖರವಾಗಿ ಗುರಿ ಇಟ್ಟು ಹೊಡೆಯಬಲ್ಲ' ಎಂದೆಲ್ಲ ಹೇಳತೊಡಗಿದ. ನಾನು ಅದಕ್ಕೂ ಸೊಪ್ಪು ಹಾಕದೆ ಹೌದಾ ಎಂದಷ್ಟೇ ಕೇಳುತ್ತಾ ಸುಮ್ಮನಿದ್ದೆ. ಅಷ್ಟರಲ್ಲಿ ಅವನ ಹೆಂಡತಿ ಕಾಫಿ ತಂದು ಕೊಟ್ಟಳು. ಬಿಸಿಯಾದ ಸ್ಟ್ರಾಂಗ್ ಕಾಫಿ ಎಂದರೆ ನನಗೆ ಪಂಚಪ್ರಾಣ. ಅದೂ ಕಪ್ ಸಾಸರಿನಲ್ಲಿ ಕುಡಿಯುವುದು ಎಂದರೆ ತುಂಬ ಇಷ್ಟ. ಬಿಸಿಯಾದ ಕಾಫಿಯನ್ನು ಸಾಸರಿಗೆ ಹಾಕಿ ಸೊರ್ ಅಂತ ಶಬ್ದ ಬರುವಂತೆ ಹೀರೋದು ಎಂದರೆ ನನಗೆ ಇಷ್ಟ. ಹಾಗೆಯೇ ನಾನು ಶಬ್ದ ಮಾಡುತ್ತಾ ಹೀರತೊಡಗಿದೆ ಅಷ್ಟೇ. ಸರಕ್ಕನೆ ಒಂದು ಪ್ಲಾಸ್ಟಿಕ್ ಬಾಣ ಬಂದು ನನ್ನ ಕಾಫಿಯ ಕಪ್ಪಿಗೆ ಬಿತ್ತು. ಕಾಫಿ ತುಳುಕಿ ನನ್ನ ಬಿಳಿಯ ಅಂಗಿ ಎಲ್ಲವೂ ಕಲಾಮಯವಾಯಿತು. ಜೊತೆಗೆ ಬಿಸಿಯೂ ಸೋಕಿತು. ಅಯ್ಯೋ! ಎಂದು ಒಮ್ಮೆಲೆ ಕಿರುಚಿಕೊಂಡೆ. ಗೆಳೆಯ ಹ ಹ್ಹಾ ಎಂದು ಅಟ್ಟಹಾಸದಿಂದ ನಗತೊಡಗಿದ.

'ನೋಡಿದ್ಯಾ ನನ್ನ ಮಗನ ಶಬ್ದವೇದಿ ವಿದ್ಯೆಯ ಪ್ರಭಾವ? ನೀನು ಆಗಲೇ ಅವನ ಬಿಲ್ಲು ವಿದ್ಯೆಯ ನಿಪುಣ ಗುರಿಯ ಕಲೆಯ ಬಗ್ಗೆ ತಿಳಿದುಕೊಳ್ಳುತ್ತಿದ್ದರೆ ಈ ಕಷ್ಟವೇ ಇರುತ್ತಿರಲಿಲ್ಲ. ಅವನು ಶಬ್ದವೇಧಿ ವಿದ್ಯೆಯ ಬೇರೆ ಯಾವುದಾದರೂ ಮಾದರಿ ತೋರಿಸುತ್ತಿದ್ದ. ನೀನು ಕೇಳಲಿಲ್ಲ. ಅದಕ್ಕೆ ಅವನು ಸಿಟ್ಟಿನಿಂದ ಬಾಗಿಲ ಮರೆಯಲ್ಲಿ ನಿಂತು ಕಾಫಿ ಕುಡಿಯುವ ಸದ್ದು ಕೇಳಿದ ಕೂಡಲೇ ಗುರಿಯಿಟ್ಟು ಬಾಣ ಹೊಡೆದ. ಹೇಗಿತ್ತು ಕರಾಮತ್ತು? ಎಂದು ನಗುತ್ತಾ ನುಡಿದ. ಕಾಫಿ ಮೈಮೇಲೆ ಚೆಲ್ಲಿ ಮೈ ಬಿಸಿ ಆಗಿ ನೋವು ಅನುಭವಿಸಿದ್ದು ಒಂದು ಕಡೆ ಆದರೆ, ಶರ್ಟ್ ಎಲ್ಲವೂ ಕಲೆಯಾದದ್ದು ಮತ್ತೊಂದು ಕಡೆ ನೋವು. ಸಿಟ್ಟು ಬಂತು. ಆದರೆ ಎಂಟು ಒಂಬತ್ತು ವರ್ಷದ ಮುದ್ದಾದ ಹುಡುಗನೊಬ್ಬ 'ಅಂಕಲ್... ಸಾರೀ ನೋವಾಯಿತಾ?' ಎಂದು ಕೇಳಿದಾಗ ನೋವೆಲ್ಲವೂ ಮರೆಯಾಯಿತು. ಮುದ್ದು ಮುದ್ದಾದ ಹುಡುಗನನ್ನು ಬಯ್ಯಲು ಮನಸಾಗಲಿಲ್ಲ. ಬದಲಿಗೆ ನಗು ಉಕ್ಕಿ ಬಂತು. ಶರ್ಟು ಹಾಳಾದರೂ ಚಿಂತೆ ಇಲ್ಲ ಎಂದುಕೊಂಡೆ. ಸಣ್ಣ ಮಕ್ಕಳು ಆಗಷ್ಟೇ ಮಾತು, ನಡಿಗೆ ಕಲಿತವಕ್ಕೆ ತಮ್ಮ ಎಲ್ಲ ಪ್ರತಿಭೆಯನ್ನು ಪ್ರದರ್ಶಿಸುವ ಹುಮ್ಮಸ್ಸು ಸರ್ವೇ ಸಾಮಾನ್ಯ. ಆ ಮಕ್ಕಳಿಗಿಂತಲೂ ಅವರ ತಾಯಂದಿರಿಗೆ ಬಂದ ನೆಂಟರು, ಇಷ್ಟರ ಎದುರಲ್ಲಿ ಅವುಗಳನ್ನು ಪ್ರದರ್ಶಿಸುವ ಉಮೇದು ಜೋರು ಇರುತ್ತದೆ.

ಒಮ್ಮೆ ಹೀಗೆ ಆಯಿತು. ಪರಿಚಯದವರ ಮನೆಗೆ ಹೋಗಿದ್ದೆ. ಅಲ್ಲಿ ಆತ ಇರಲಿಲ್ಲ. ಹೊರಗೆ ಹೋಗಿದ್ದಾರೆ, ಇನ್ನೇನು ಬರ್ತಾರೆ ಅಂತ ಮನೆಯಾಕೆ ಹೇಳಿದರು. ಅಷ್ಟರಲ್ಲಿ ಅವರ ಪುಟ್ಟ ಪಾಪು ಹೆಣ್ಣು ಮಗು ಒಂದೊಂದೇ ಹೆಜ್ಜೆ ಇಡುತ್ತ ಬಂತು. ತೊದಲು ಮಾತಾಡುತ್ತಿತ್ತು. ಖುಷಿಯಿಂದ ಮಾತಾಡಿಸಿದೆ. ಅದರದ್ದೇ ಭಾಷೆಯಲ್ಲಿ ಏನನ್ನೋ ಮಾತಾಡಿತು. ನನಗೆ ಅರ್ಥವಾಗಲಿಲ್ಲ. ಅಷ್ಟು ಹೊತ್ತಿನಲ್ಲಿ ಆ ಮಗುವಿನ ತಾಯಿ ಹೊರಬಂದು, 'ಇವಳು ತನ್ನ ಬಾಡಿ ಪಾರ್ಟ್ಸನ್ನೆಲ್ಲ ತೋರಿಸ್ತಾಳೆ. ಅಷ್ಟು ಚುರುಕು ಇದ್ದಾಳೆ ಗೊತ್ತುಂಟಾ?' ಅಂತ ಹೇಳಿದರು. ನಂತರ ಐಸ್ ಎಲ್ಲಿ? ಈಯರ್ ಎಲ್ಲಿ? ಮೌತ್ ಎಲ್ಲಿ? ಅಂತ ಒಂದೊಂದೇ ಅಂಗದ ಬಗ್ಗೆ ಹೇಳ್ತಾ ಇದ್ದಂತೆ ಆ ಮಗು ತೋರಿಸ್ತಾ ಇತ್ತು. ಅಲ್ಲಿಯೇ ಪಕ್ಕದಲ್ಲಿದ್ದ ಆ ಮಗುವಿನ ಅಣ್ಣ ಸುಮಾರು ಏಳೆಂಟು ವರ್ಷದವನಿರಬೇಕು, ಆತ 'ಬೊಂಬಾಯಿ ಎಲ್ಲಿ? ಬೊಂಬಾಯಿ?' ಅಂತ ಕೇಳಿದ. ಆಗ ಆ ಮಗುವಿನ ಅಮ್ಮ, 'ಷ್ಯೋ ಹಾಗೆಲ್ಲ ಬಂದವರ ಎದುರಿಗೆ ಹೇಳ್ಬಾರ್ದು' ಅಂತ ಗದರಿಸಿದರು. ಅಷ್ಟು ಹೊತ್ತಿಗೆ ಆ ಮಗು ಚಡ್ಡಿ ಕಳಚಲು ಹೊರಟಿತ್ತು. ತಾಯಿ ತಡೆದಳು. ಅಲ್ಲಿಗೇ ಪರಿಸ್ಥಿತಿ ಸುಖಾಂತ್ಯ ಆಯಿತು ಅಂದುಕೊಳ್ಳುವಷ್ಟರಲ್ಲಿ ಆ ಹುಡುಗ, 'ಅಂಕಲ್ ನೀವು ನಿಮ್ಮ ಬಾಡಿ ಪಾರ್ಟೆಲ್ಲ ಇಂಗ್ಲಿಷಲ್ಲಿ ಹೇಳ್ತಾ ತೋರಿಸ್ತೀರಾ?' ಅಂತ ಕೇಳಿದ. ನಾನು ಹೆದರಿದೆ. ಇನ್ನು ನಂಗೂ ಬೊಂಬಾಯಿ ತೋರಿಸಿ ಅಂತ ಹೇಳಿದರೆ?! ಆಪತ್ತಿಗೆ ಆಗುವುದೇ ಮೊಬೈಲ್. ಯಾರಿಗೋ ಕಾಲ್ ಮಾಡುವವನಂತೆ ನಟಿಸುತ್ತ ಹೊರಗೆ ಬಂದವನೇ 'ನೋಡಿ, ನಾನು ಈಗ ಬರ್ತೇನೆ. ಅಂದವನೇ ಅಲ್ಲಿಂದ ಓಟಕಿತ್ತೆ. ಹೇ .. ಹೇ' ಅಂತ ಆ ಮುಗ್ಧ ಅಣ್ಣ ತಂಗಿ ನನ್ನನ್ನು ನೋಡಿ ಮಕ್ಕಾರು ಮಾಡ್ತಾ ಇದ್ದದ್ದು ಗೇಟು ದಾಟಿ ಬಂದರೂ ನನ್ನ ಕಿವಿಗಳಿಗೆ ಅಪ್ಪಳಿಸುತ್ತಿತ್ತು.

ಪ್ರತಿಕ್ರಿಯಿಸಿ: feedback@sudha.co.in